ಡಿ.ಡಬ್ಲ್ಯು.1

(ಇಂದು ದಿನಾಂಕ 12-07-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ – 2 ನೇ ಪ್ರತಿವಾದಿ ಪರ ಶ್ರೀ ಎಸ್.ಜೆ.ಎನ್. ವಕೀಲರಿಂದ–**

ನಾನು ಈ ಪ್ರಕರಣದಲ್ಲಿ 2 ನೇ ಪ್ರತಿವಾದಿ ಇದ್ದು, ನನ್ನ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇದೆ. ಅದನ್ನು ನಾನೇ ಹೇಳಿ ಬರೆಸಿದ್ದೇನೆ.

ನಾನು ದಾವೆಗೆ ಸಂಬಂಧಪಟ್ಟಂತೆ ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. 2 ನೇ ಪ್ರತಿವಾದಿಯು 1 ನೇ ಪ್ರತಿವಾದಿಯವರಿಗೆ ವಾದಿಯ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಕುರಿತು ನೀಡಿರುವ ದೂರಿನ ಪ್ರತಿಯನ್ನು ಗುರುತಿಸಲು ವಾದಿ ಪರ ವಕೀಲರು ತಕರಾರು ಸಲ್ಲಿಸಿದ್ದು ತಕರಾರಿಗೆ ಒಳಪಟ್ಟು ನಿ.ಡಿ. 1 ಎಂದು, 2 ನೇ ಪ್ರತಿವಾದಿಯ ತಾಯಿಯವರು ಕುಮಟಾ ಪೊಲೀಸ್ ಠಾಣೆಯಲ್ಲಿ ನೀಡಿರುವ ದೂರಿನ ದೃಢೀಕೃತ ಪ್ರತಿಯನ್ನು ನಿ.ಡಿ. 2 ಎಂದು, ನಿವೃತ್ತ ಕೆ ಇ ಬಿ ಕುಮಟಾ ಲೈನ್ ಮೆನ್ ಶ್ರೀ. ಜುಜೆ ರವರು ಕುಮಟಾ ಪೊಲೀಸನವರ ಮುಂದೆ ನೀಡಿದ ಹೇಳಿಕೆಯ ದೃಢೀಕೃತ ಪ್ರತಿಯನ್ನು ನಿ.ಡಿ. 3 ಎಂದು, ಕುಮಟಾ ಪೊಲೀಸನವರು ದಿಃ 23-03-2018 ರಂದು ನೀಡಿದ ಹಿಂಬರಹದ ದೃಢೀಕೃತ ಪ್ರತಿಯನ್ನು ನಿ.ಡಿ. 4 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ 2 ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗೆ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ಜಡ್ಜ, ಕುಮಟಾ